(ii) ಕಿತ್ತೂರುರಾಣಿ ಚೆನ್ನಮ್ಮ ಎಜುಕೇಷನ್ ಸೊಸೈಟಿಯವರು ಬೈಲಹೊಂಗಲ ನಗರದಲ್ಲಿ ಕನ್ನಡ ಮಾಧ್ಯಮ ಪ್ರೌಢಶಾಲೆ ಪ್ರಾರಂಭಿಸಲು ಅನುಮತಿ

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯಲ್ಲಿ ಬೈಲಹೊಂಗಲ ನಗರದಲ್ಲಿ ಕಿತ್ತೂರು ಚೆನ್ನಮ್ಮ ಎಜುಕೇಷನಲ್ ಸೊಸೈಟಿಯವರು ಕನ್ನಡ ಮಾಧ್ಯಮ ಪ್ರೌಢಶಾಲೆಯನ್ನು ತೆಗೆಯಲು ವಿನಂತಿಸಿಕೊಂಡಿದ್ದಾರೆ. ಇವರು ಖಾಸಗಿ ಶಾಲೆ ತೆರೆಯಲು ವಿನಂತಿಸಿಕೊಂಡಿದ್ದು ಈ ಸಂಸ್ಥೆಯವರು ಸರಕಾರದ ನಿಯಮಗಳ ಪ್ರಕಾರ ತೆರೆಯಲು ಒಪ್ಪಿರುತ್ತಾರೆ. ಈ ಸಂಸ್ಥೆಯವರು ಬಿ.ಎಡ್. ಕಾಲೇಜು ನಡೆಸುತ್ತಿದ್ದು ಯೂನಿವರ್ಸಿಟಿ ರೂಲ್ಸ್ ಪ್ರಕಾರ ಒಂದು ಪ್ರಾಕ್ಟೀಸಿಂಗ್ ಹೈಸ್ಕೂಲ್ ನಡೆಸಬೇಕು ಎಂದು ನಿಯಮ ಸಹ ಇದ್ದು, ಯೂನಿವರ್ಸಿಟಿಯವರು ಕೂಡಲೇ ಹೈಸ್ಕೂಲ್ ಪ್ರಾರಂಭಿಸದೇ ಇದ್ದಲ್ಲಿ ಅಫೀಲಿಯೇಷನ್ ರದ್ದುಪಡಿಸಲಾಗುವುದೆಂದಂ ಮೇಲಿಂದ ಮೇಲೆ ಕಾಲೇಜಿಗೆ ತಿಳಿಸುತ್ತಿದ್ದಾರೆ. ಬೈಲಹೊಂಗಲವು ರೆವಿನ್ಯೂ ಹೆಡ್‌ಕ್ವಾರ್ಟರ್ಸ್ ಇದ್ದು ಇಲ್ಲಿ ಖಾಸಗಿ ಪ್ರೌಢಶಾಲೆಯನ್ನು ತೆರೆಯಲು ಅನುಮತಿ ಕೊಡಲು ನಾನು ತಮ್ಮ ಮುಖಾಂತರ ಮಾನ್ಯ ಶಿಕ್ಷಣ ಸಚಿವರು ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್. (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಕೇಳಕಂಡ ಹೇಳಿಕೆಯನ್ನು ತಮ್ಮ ಅನುಮತಿಯನ್ನು ಪಡೆದು ನೀಡಲಿಚ್ಛಿಸುತ್ತೇನೆ.

ಬೆಳಗಾಂ ಜಿಲ್ಲೆಯು ಬೈಲಹೊಂಗಲದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಶಿಕ್ಷಣ ಸಂಸ್ಥೆಯವರಿಂದ ಕನ್ನಡ ಮಾಧ್ಯಮ ಪ್ರೌಢಶಾಲೆಯನ್ನು ಮಂಜೂರಾತಿ ಮಾಡುವ ಬಗ್ಗೆ ಸರಕಾರಕ್ಕೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. ಬಂದಲ್ಲಿ ಪರಿಶೀಲಿಸಲಾಗುವುದು.

(iii) ಬೆಂಗಳೂರು ನಗರ ಪ್ರದೇಶವಾದ ಶ್ರೀನಗರ ಬನಶಂಕರಿಯಲ್ಲಿ ಆರೋಗ್ಯ ಸೌಲಭ್ಯ ಕಲ್ಪಿಸುವ ಬಗ್ಗೆ

ಶ್ರೀ ಪೆರಿಕಲ್ ಎಂ.ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಶ್ರೀನಗರ ಬನಶಂಕರಿ ಒಂದನೇ ಹಂತ, ಎರಡನೇ ಹಂತ ಬಡಾವಣೆಗಳು ಅತ್ಯಂತ ಜನನಿಬಿಡ ಬಡಾವಣೆಗಳಾಗಿವೆ. ಬಡವರು ಮಧ್ಯಮವರ್ಗದವರು ಇಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಇಲ್ಲಿ ನಗರಸಭೆಯ ಆಸ್ಪತ್ರೆಯಾಗಲೀ ಅಥವಾ ಸರ್ಕಾರಿ ಆಸ್ಪತ್ರೆಯಾಗಲೀ ಇಲ್ಲ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆ. ಈ ಭಾಗದಲ್ಲಿ ಕೂಡಲೇ ಸರಕಾರದ ವತಿಯಿಂದ ಒಂದು ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾರಂಭಿಸಬೇಕು. ಶ್ರೀನಗರವು ಕಾರ್ಪೊರೇಷನ್ ವ್ಯಾಪ್ತಿಗೆ ಬರುವುದರಿಂದ ಇಲ್ಲಿ ಕಾರ್ಪೊರೇಷನ್ ವತಿಯಿಂದ ಒಂದು ಆಸ್ಪತ್ರೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಬೇಕು. ಬನಶಂಕರಿ ಒಂದನೇ ಮತ್ತು ಮೂರನೇ ಹಂತಕ್ಕಳು ಬಿ.ಡಿ.ಎ. ವ್ಯಾಪ್ತಿಗೆ ಬರುವುದರಿಂದ, ಇಲ್ಲಿ ಬಿ.ಡಿ.ಎ. ವತಿಯಿಂದ ಒಂದು ಜಾಗವನ್ನು ಪಡೆದುಕೊಂಡು ಸರ್ಕಾರದವರು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಹೆರಿಗೆ ಆಸ್ಪತ್ರೆಯನ್ನು ಪ್ರಾರಂಭಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದ ಈ ಭಾಗದ ಬಡಜನರಿಗೆ ಅದರಲ್ಲೂ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಅವರ ಚಿಕಿತ್ಸೆಗೆ ಬಹಳ ಅನುಕೂಲವಾಗುತ್ತದೆ. ಈ ಬಗ್ಗೆ ಮಾನ್ಯ ಆರೋಗ್ಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿರುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಸಚಿವರು) —ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯ ಕಲ್ಪಿಸುವುದು. ಮುಖ್ಯವಾಗಿ ಮಹಾನಗರ ಪಾಲಿಕೆಯ ಕರ್ತವ್ಯ ಆದರೂ ಮಾನ್ಯ ಸದಸ್ಯರು ಎತ್ತಿರತಕ್ಕಂಥ ಪ್ರಶ್ನೆಯನ್ನು ಪರಿಶೀಲಿಸಲಾಗುವುದು.

(iv) Construction of a Truck Terminal on the outskirts of Belgaum City

SRI K. C. MODGEKAR DESAI —Sir Belgaum is a district hedquarters and is a developing city. It is also a business centre connected with business centres of other states. Due to havey vehicular traffic.